## ಸಂಗೀತ ಕಲಿಕೆಯ ಉದ್ದೇಶ ಮತ್ತು ಮಹತ್ವ;

ಸಂಗೀತವನ್ನು ಅಭ್ಯಾಸ ಮಾಡುವುದರಿಂದ ಏಕಾಗ್ರತೆ, ಗ್ರಹಣಶಕ್ತಿ, ಸ್ಮರಣಶಕ್ತಿ, ಚಿಂತನಶೀಲತೆ, ಸೃಜನಶೀಲತೆ ಹೆಚ್ಚುವುದರಿಂದ ಸಂಗೀತವನ್ನು ಅಭ್ಯಾಸ ಮಾಡುವವರ ಬುದ್ಧಿಶಕ್ತಿಯ ಮಟ್ಟವು ವೃದ್ಧಿಗೊಳ್ಳುತ್ತದೆ. ಶಿಸ್ತಿನಿಂದ ಅಭ್ಯಾಸ ಮಾಡಿದರೆ ಮಾತ್ರ ಸಂಗೀತವು ಸಿದ್ಧಿಸುವುದು. ಇದರಿಂದ ಸಂಗೀತ ವಿದ್ಯಾರ್ಥಿಗೆ ತನ್ನ ದಿನಚರಿಯಲ್ಲಿ ಶಿಸ್ತು ಏರ್ಪಡುತ್ತದೆ. ಇತರೆ ವಿಷಯಗಳನ್ನು ಅಭ್ಯಾಸ ಮಾಡುವಾಗ ಉಂಟಾಗುವ ಬೇಸರಿಕೆಯನ್ನು ನೀಗಿಸಲು ಹಾಗೂ ಮೆದುಳಿಗೆ ವಿಶ್ರಾಂತಿ ದೊರಕುವಂತೆ ಮಾಡಲು ಲಲಿತಕಲೆ ಸಹಕರಿಸುವುದರಿಂದ ಸಂಗೀತಕ್ಕೆ ಹೆಚ್ಚಿನ ಆದ್ಯತೆ ಇದೆ. ಸಂಗೀತವನ್ನು ಯಾವ ಕಾಲಕ್ಕೂ, ಯಾವ ದೇಶದಲ್ಲೂ, ಯಾವ ವಯಸ್ಸಿನಲ್ಲೂ ಹಾಡಿಕೊಳ್ಳಲು ಅಥವಾ ನುಡಿಸಿಕೊಳ್ಳಲು ಅನುಕೂಲವಾಗುವುದರಿಂದ ಲಲಿತಕಲೆಗಳಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಒಟ್ಟಿನಲ್ಲಿ ಹೇಳುವುದಾದರೆ ಸಂಗೀತವು ಮಾನವನನ್ನು ಮಾನವತ್ವದಿಂದ ಅಮರತ್ವಕ್ಕೆ ಕೊಂಡೊಯ್ಯುವ ಸುನಾದದಿಂದ ಕೂಡಿದ ಮಧುರವಾದ ಲಲಿತ ಕಲೆ. ಈ ಹಿರಿಮೆ ಸಂಗೀತದ್ದಾಗಿದೆ.

## ಪರಿವಿಡಿ

ಸಂಗೀತದ ಲಕ್ಷಣ – ಶಾಸ್ತ್ರ ವಿಭಾಗ ಮತ್ತು ಪ್ರಾಯೋಗಿಕ ವಿಭಾಗಗಳು

1. ಕಲೆಯ ಇತಿಹಾಸದ ಪರಿಚಯ –

ಅ. ಲಲಿತಕಲೆಗಳಲ್ಲಿ ಸಂಗೀತದ ಸ್ಥಾನ ,
ಆ. ಭಾರತೀಯ ಸಂಗೀತ ಪದ್ಧತಿಗಳು – ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ.
ಇ. ಈ ಎರಡು ಪದ್ಧತಿಗಳ ಸಾಮ್ಯ ಮತ್ತು ವ್ಯತ್ಯಾಸ
ಈ. ಕರ್ನಾಟಕ ಶಾಸ್ತ್ರೀಯ ಸಂಗೀತದ ವೈಶಿಷ್ಟ್ಯ

2. ಸಂಗೀತದ ಪಾರಿಭಾಷಿಕ ಶಬ್ದಗಳ ಸಂಕ್ಷೇಪ ವಿವರಣೆ

ಅ. ಸಂಗೀತ, ಸ್ವರ, ಪ್ರಕೃತಿ ಮತ್ತು ವಿಕೃತಿ ಸ್ವರಗಳು, ಆರೋಹಣ ಮತ್ತು ಅವರೋಹಣ
ಆ. ರಾಗ – ಜನಕ ಮತ್ತು ಜನ್ಯ ರಾಗಗಳು – ಉಪಾಂಗ ಮತ್ತು ಭಾಷಾಂಗ ರಾಗಗಳು
ಇ. ಸ್ಥಾಯಿ – ಮಂದ್ರ , ಮಧ್ಯ, ಮತ್ತು ತಾರಸ್ಥಾಯಿಗಳು,

3. ತಾಳ –

ಅ. ಆವರ್ತ, ಅಕ್ಷರಕಾಲ
ಆ.ಸುಳಾದಿ ಸಪ್ತ ತಾಳಗಳು ಅದರ ಅಂಗ, ಜಾತಿ ಮತ್ತು ಸಂಜ್ಞೆ
ಇ. ಪ್ರಥಮ, ದ್ವಿತೀಯ ಮತ್ತು ತೃತೀಯ ಕಾಲಗಳ ಪರಿಚಯ

4. ರಾಗ – ರಾಗ ಲಕ್ಷಣಗಳು – ಪ್ರಾಯೋಗಿಕ ವಿಭಾಗದಲ್ಲಿ ನಡೆದಿರುವ ರಾಗಗಳು

ಅ. ಮಾಯಾಮಾಳವ ಗೌಳ
ಆ. ಮೋಹನ
ಇ.ಹಂಸಧ್ವನಿ
ಈ.ಖರಹರಪ್ರಿಯ
ಉ.ನಾಗಸ್ವರಾವಳಿ

5. ಸಂಗೀತ ರಚನೆಗಳ ಲಕ್ಷಣ
ಅ. ಸಂಚಾರಿ ಗೀತೆ
ಆ. ಜತಿಸ್ವರ
ಇ.ತಾನವರ್ಣ
ಈ.ಕೃತಿ

6. ವಾಗ್ಗೇಯಕಾರರ ಜೀವನ ಚರಿತ್ರೆಗಳು ಮತ್ತು ಅವರ ಕೊಡುಗೆ
ಅ. ಪುರಂದರ ದಾಸರು
ಆ. ತ್ಯಾಗರಾಜರು
ಇ. ಮುತ್ತುಸ್ವಾಮಿ ದೀಕ್ಷಿತರು
ಈ. ಮೈಸೂರು ವಾಸುದೇವಾಚಾರ್ಯರು
ಉ. ಬಸವಣ್ಣ

7. ಆರೋಹಣ, ಅವರೋಹಣ ಮತ್ತು ಅಂಕಿತಗಳನ್ನು ಹಾಡಿದಾಗ ರಾಗ ಮತ್ತು ರಚನೆಯನ್ನು ಗುರುತಿಸುವ ಸಾಮರ್ಥ್ಯ
(ಮೋಹನ, ಹಂಸಧ್ವನಿ, ಮಾಯಾಮಾಳವಗೌಳ, ಖರಹರಪ್ರಿಯ, ಮಲಹರಿ ಮುಂತಾದವು )

<u>ಪರೀಕ್ಷಾ ವಿಧಾನ – ಬೋಧನಾ ವಿಧಾನಗಳು</u>

ಕಲಿಸುವ ಅವಧಿ;
ಪ್ರಾಯೋಗಿಕ – 90 ಘಂಟೆಗಳು
ಶಾಸ್ತ್ರ – 30 ಘಂಟೆಗಳು

ಕೇಳ್ಮೆಯ ಅವಧಿ – 12 ಘಂಟೆಗಳು
ಪ್ರಾಯೋಗಿಕ ಪರೀಕ್ಷೆ– 06 ಘಂಟೆಗಳು
ವಿಚಾರಣಾ ಅವಧಿ – 06 ಘಂಟೆಗಳು
ರಿವಿಷನ್ – 06 ಘಂಟೆಗಳು
ಒಟ್ಟು – 150 ಘಂಟೆಗಳು

ಪ್ರಥಮ ಪಿ.ಯು.ಸಿ ಮೌಲ್ಯ ಮಾಪನ
* ತರಬೇತಿ ಅವಧಿ; ಒಂದು ವಾರದಲ್ಲಿ 4 ಪ್ರಾಯೋಗಿಕ, 1 ಶಾಸ್ತ್ರ.
* ಗಾಯನ ಮಾತ್ರ.
* ಶಾಸ್ತ್ರ ವಿಭಾಗ; ಒಂದು ವಾರದಲ್ಲಿ 1ಘಂಟೆಯ ಅವಧಿ.
* ಪ್ರಾಯೋಗಿಕ ಅಂಕ; 60 – ತೇರ್ಗಡೆ – ಕನಿಷ್ಠ – 22.
* ಶಾಸ್ತ್ರ ವಿಭಾಗದ ಅಂಕ; 30 – ತೇರ್ಗಡೆ –ಕನಿಷ್ಠ – 10
* ಆಂತರಿಕ ಗುಣಗಳು ; 10 – ತೇರ್ಗಡೆ –ಕನಿಷ್ಠ – 03
( ಹಾಜರಾತಿ, ಸಾಮಾನ್ಯ ಮತ್ತು ಆಂತರಿಕ ಗುಣಗಳು )

## <u>ಪರೀಕ್ಷಾ ವಿಧಾನ</u>

* ಪ್ರಾಯೋಗಿಕ ಪರೀಕ್ಷೆ – 1 ವಿದ್ಯಾರ್ಥಿಗೆ 25 ನಿಮಿಷ
* ಶಾಸ್ತ್ರ ಪರೀಕ್ಷೆಯ ಅವಧಿ – 2 ಘಂಟೆ
* ಪ್ರಾಯೋಗಿಕ ಹಾಗು ಶಾಸ್ತ್ರ ಪರೀಕ್ಷೆಗಳಲ್ಲಿ ಪ್ರತ್ಯೇಕ ತೇರ್ಗಡೆ ಅನಿವಾರ್ಯ
* ಒಟ್ಟು 100 ಅಂಕಗಳಿಗೆ ಕನಿಷ್ಠ 35% ಪ್ರತಿಶತ ಅಂಕಗಳು ತೇರ್ಗಡೆಗೆ ಅನಿವಾರ್ಯ.
* ದೃಶ್ಯ , ಶ್ರವಣ ಅವಧಿ ಮತ್ತು ಸಿ.ಡಿ, ಕ್ಯಾಸೆಟ್, ಇತ್ಯಾದಿ– ಒಂದು ಶೈಕ್ಷಣಿಕ ವರ್ಷಕ್ಕೆ 12 ಘಂಟೆಗಳು ಕಡ್ಡಾಯ.
* ಒಂದು ಶೈಕ್ಷಣಿಕ ವರ್ಷಕ್ಕೆ –
ಪ್ರಾಯೋಗಿಕ– 90– ತರಗತಿಗಳು,
ಶಾಸ್ತ್ರ – 30– ತರಗತಿಗಳು

## ಮಾದರಿ ಪ್ರಶ್ನಪತ್ರಿಕೆ

ಪ್ರಶ್ನಾವಳಿಗಳು

1) ಒಂದು ವಾಕ್ಯದಲ್ಲಿ ಉತ್ತರಿಸಿ;

1) ನಾಗಸ್ವರಾವಳಿ ರಾಗವು ಯಾವ ಮೇಳದಲ್ಲಿ ಜನ್ಯ ?
2) ಕೃತಿಗಳಲ್ಲಿ ಸಂಗತಿಗಳನ್ನು ರೂಢಿಗೆ ತಂದವರು ಯಾರು ?
3) ಮೈಸೂರು ವಾಸುದೇವಾಚಾರ್ಯರ ಅಂಕಿತ ಏನು ?
4) ಜಾತಿಗಳನ್ನು ಹೆಸರಿಸಿ.
5) ಅಭ್ಯಾಸ ಗಾನದ ರಚನೆಗಳು ಯಾವುವು ?

ಹೊಂದಿಸಿ ಬರೆಯಿರಿ;

| | |
|---|---|
| 1) ಸರಳೆವರಸೆಗಳು | ಕೂಡಲಸಂಗಮ ದೇವ |
| 2) ಶ್ರುತಿ ವಾದ್ಯ. | ಭಾಷಾಂಗ ರಾಗ |
| 3) ಅನುದ್ರುತ | ಮಾಯಾಮಾಳವಗೌಳ |
| 4) ಅನ್ಯಸ್ವರ | ಝಂಪೆ ತಾಳ |
| 5) ಬಸವಣ್ಣ | ತಂಬೂರಿ |

2)ಈ ಕೆಳಗಿನ ಯಾವುದಾದರೂ ಎರಡು ರಾಗಗಳಿಗೆ ಲಕ್ಷಣವನ್ನು ಬರೆಯಿರಿ ;
1) ಮಾಯಾಮಾಳವಗೌಳ
2) ಮೋಹನ
3) ಖರಹರಪ್ರಿಯ

3) ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ ;
1) ಪ್ರಕೃತಿ ಮತ್ತು ವಿಕೃತಿ ಸ್ವರಗಳು
2) ಸಂಚಾರಿ ಗೀತೆ
3) ಜತಿಸ್ವರ

4) ಸುಳಾದಿ ಸಪ್ತತಾಳಗಳನ್ನು ವಿವರಿಸಿ ;
5) ಶ್ರೀ ಪುರಂದರ ದಾಸರ ಜೀವನ ಚರಿತ್ರೆಯನ್ನು ಬರೆದು ಅವರು ಕರ್ನಾಟಕ ಸಂಗೀತಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಿ

ಪ್ರಶ್ನಪತ್ರಿಕೆ –2

ಬಿಟ್ಟಿರುವ ಜಾಗವನ್ನು ಭರ್ತಿ ಮಾಡಿ ;
1) ಕರ್ನಾಟಕ ಸಂಗೀತದಲ್ಲಿ ______ ಮತ್ತು _______ ಎಂಬ ಎರಡು ಭಾಗಗಳಿವೆ.
2) ಧೃತದಿಂದ ಪ್ರಾರಂಭವಾಗುವ ತಾಳ ___________.
3) ಮೋಹನ ರಾಗಕ್ಕೆ ________ ಧೈವತವು ಬರುತ್ತದೆ.
4) _______ ಸ್ಥಾಯಿಗೆ ಸ್ವರಗಳ ಮೇಲೆ ಚುಕ್ಕೆ ಇಡಲಾಗುತ್ತದೆ.
5) ಆದಿತಾಳಕ್ಕೆ _______ ಅಕ್ಷರಗಳು ಬರುತ್ತದೆ.

ಒಂದು ವಾಕ್ಯದಲ್ಲಿ ಉತ್ತರಿಸಿ;
1) ಗಾಂಧಾರದಲ್ಲಿ ಮೂರು ವಿಧಗಳು ಯಾವುವು ?
2) ಕೃತಿಯ ಮೂರು ಅಂಗಗಳು ಯಾವುವು ?
3) ಪ್ರಕೃತಿ ಸ್ವರಗಳನ್ನು ಹೆಸರಿಸಿ.
4) ಮುತ್ತುಸ್ವಾಮಿ ದೀಕ್ಷಿತರ ಅಂಕಿತ ಏನು ?
5) ಅಟತಾಳದ ಅಂಗಗಳು ಯಾವುವು ?

ಈ ಕೆಳಗಿನ ಯಾವುದಾದರೂ ಎರಡು ರಾಗಗಳಿಗೆ ಲಕ್ಷಣವನ್ನು ಬರೆಯಿರಿ ;
1] ನಾಗಸ್ವರಾವಳಿ
2] ಹಂಸಧ್ವನಿ
3] ಮಾಯಾಮಾಳವಗೌಳ

ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ ;
1] ತಾನವರ್ಣ
2] ಜಾತಿ
3]ಸ್ಥಾಯಿ

ಕರ್ನಾಟಕ ಹಾಗೂ ಹಿಂದೂಸ್ಥಾನಿ ಪದ್ಧತಿಗಳ ಸಾಮ್ಯ ಮತ್ತು ವ್ಯತ್ಯಾಸಗಳನ್ನು ವಿವರಿಸಿ;

ಶ್ರೀ ತ್ಯಾಗರಾಜರ ಜೀವನ ಚರಿತ್ರೆಯನ್ನು ಬರೆದು ಅವರು ಕರ್ನಾಟಕ ಸಂಗೀತಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಿ.

## ಭಾರತೀಯ ಸಂಸ್ಕೃತಿಯ ಹಿನ್ನೆಲೆ;

ಕಲೆ ಎಂಬುದು ನಾನಾರ್ಥ ವಾಚಕಶಬ್ದ. ಸಂಗೀತ , ಶಿಲ್ಪ, ನಾಟ್ಯ , ಸಾಹಿತ್ಯ ಇತ್ಯಾದಿಗಳೆಲ್ಲಾ ಲಲಿತ ಕಲೆಗಳೆಂದು ಕರೆಯಲ್ಪಡುತ್ತದೆ. ಮಾನವತ್ವಕ್ಕೂ ಕಾರಣೀಭೂತವಾಗುತ್ತವೆ ಈ ಕಲೆಗಳು. ಒಂದು ರಾಷ್ಟ್ರದ ಪ್ರಗತಿಯು ಕಲೆಗಳನ್ನೇ ಅವಲಂಬಿಸಿದೆ. ಆದ್ದರಿಂದ ಕಲೆಯಿಂದ ಮಾನವ, ಮಾನವನಿಂದ ಕಲೆ ಎನ್ನಬಹುದು. ಹೀಗೆ ಕಲೆ ವಿಶ್ವ ವ್ಯಾಪಿಯಾದದ್ದು. ಈ ಲಲಿತ ಕಲೆಗಳೆಲ್ಲಾ ಒಟ್ಟು ಗೂಡಿ ಒಂದು ಪ್ರಪಂಚವೇ ಸೃಷ್ಟಿಯಾಗುತ್ತದೆ. ಈ ಕಲೆ ಪ್ರಪಂಚವನ್ನು ಹೊಕ್ಕು, ಕಲೋಪಾಸನೆಯಲ್ಲಿ ತೊಡಗಿ ದರ್ಶನ, ಶ್ರವಣ ಮತ್ತು ಮನನವೆಂಬ ವಿಧವಾದ ಹಂತಗಳಿಂದ ರಸೋತ್ಪತ್ತಿಯಾದಾಗ ಮಾನವನಿಗೆ ಮಹೋನ್ನತವಾದ ಕಲಾನುಭವವಾಗಿ ತನ್ಮೂಲಕ ಮಾನವತೆಗೆ ಒಯ್ದು ವಿಶ್ವ ಮಾನವನನ್ನಾಗಿ ಪರಿವರ್ತಿಸುತ್ತದೆ. ಕಲಾರತ್ನಗಾನಂ ಎಂಬ ಉಕ್ತಿಯಂತೆ ಲಲಿತ ಕಲೆಗಳಲ್ಲೆಲ್ಲಾ ರತ್ನಪ್ರಾಯವಾದ ಸಂಗೀತ ಕಲೆಯಂತೂ, ಮಾನವನಿಗೆ ಸಾಕ್ಷಾತ್ಕಾರವನ್ನೇ ನೀಡುವ ಉತ್ತಮೋತ್ತಮವಾದ ಸುಲಭ ಸಾಧನವಾಗಿದೆ.

ನಮ್ಮ ಭಾರತೀಯ ಶಾಸ್ತ್ರ ಪುರಾಣಗಳಲ್ಲಿ ಮತ್ತು ಸಕಲ ಧರ್ಮ ಕರ್ಮಗಳನ್ನು ನಿರೂಪಿಸುವ ಅತ್ಯಂತ ಪ್ರಾಚೀನವಾದ ಚತುರ್ವೇದಗಳಲ್ಲಿ ಒಂದಾದ ಸಾಮವೇದದ ಉಪವೇದವಾದ ಗಾಂಧರ್ವ ವೇದದಲ್ಲಿ ಉಲ್ಲೇಖವಿದೆ. ಹೀಗೆ ಪರಮಾತ್ಮನನ್ನು ಸಾಮಗಾನಲೋಲನೆಂದು, ನಾದಲೋಲ, ಗಾನಲೋಲನೆಂದು, ಈ ನಾದವೇ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣೀಭೂತವೆಂದೂ ನಮ್ಮ ಶ್ರುತಿ, ಸ್ಮೃತಿಗಳು ಅವಿಚ್ಛಿನ್ನವಾಗಿ ಸಾರಿವೆ.ಮನುಷ್ಯನು ಸುಸಂಸ್ಕೃತನೆಂದರೆ ಅವನಲ್ಲಿ ಕಲೆಯ ಅರಿವು, ಪ್ರಜ್ಞೆ ಇದೆ ಎಂದು ಅರ್ಥ. ಆದ್ದರಿಂದ ಕಲೆಗಳಿಲ್ಲದ ಬದುಕು ಬೆಳೆಯಲಾರದು ಮತ್ತು ಹದವಾಗಲಾರದು. ಹೀಗೆ ಒಂದು ಕಡೆ ಸಂಗೀತವು ಕಲೆಯಾಗಿದ್ದರೆ, ಮತ್ತೊಂದು ಕಡೆ, ಅದು ಮನುಷ್ಯರಿಗೆ ನಿಜವಾದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಉಂಟು ಮಾಡುವುದರಲ್ಲಿ ಯಶಸ್ವಿಯಾದ ವಿದ್ಯೆ ಎನಿಸಿಕೊಂಡಿದೆ. ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡುವ ಅದ್ವಿತೀಯ ಸಾಧನವಾಗಿದೆ. ಆದ್ದರಿಂದ ಕಲೆಯೂ ಮತ್ತು ವಿದ್ಯೆಯೂ ಆಗಿರುವ ಈ ಸಂಗೀತವು, ಸಮಾಜದಲ್ಲಿ ವಹಿಸುವ ಪಾತ್ರ ಅವರ್ಣನೀಯ. ಇದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯ ಮಹತ್ತರವಾದದ್ದು.

ವಿಶ್ವದಲ್ಲಿ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಒಂದು ಸಂಗೀತ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದೆ. ಇಂದು ಮೂರು ಮುಖ್ಯವಾದ ಶಾಸ್ತ್ರೀಯ ಸಂಗೀತಪದ್ಧತಿಗಳು ಮಾತ್ರ ಬಳಕೆಯಲ್ಲಿವೆ. ಅವು ಪಾಶ್ಚಾತ್ಯ ಸಂಗೀತ, ಭಾರತೀಯ ಸಂಗೀತವೆನಿಸುವ ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳು. ನಮ್ಮ ದೇಶದಲ್ಲಿ ಎರಡು ಪ್ರಮುಖವಾದ ಶಾಸ್ತ್ರೀಯ ಸಂಗೀತ ಪದ್ಧತಿಗಳು ಬಳಕೆಯಲ್ಲಿರುವುದು ಹೆಮ್ಮೆಯ ವಿಷಯ. ಇವುಗಳನ್ನು ಕ್ರಮವಾಗಿ ದಕ್ಷಿಣಾದಿ ಮತ್ತು ಉತ್ತರಾದಿ ಸಂಗೀತ ಪದ್ಧತಿಗಳೆಂದೂ ಕರೆಯುವುದು ವಾಡಿಕೆ.

ಕರ್ನಾಟಕ ಸಂಗೀತದಲ್ಲಿ ವಾಗ್ಗೇಯಕಾರರು ಬಹಳ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಶಾಸ್ತ್ರೀಯ ಸಂಗೀತ ಪರಂಪರೆಯನ್ನು ಉಳಿಸಿ ಬೆಳೆಸಲು ಕಾರಣರಾಗಿದ್ದಾರೆ.ವಾಚಂ ಗೇಯಂ ಚ ಕುರುತೇ ಯ: ಸ: ವಾಗ್ಗೇಯಕಾರ:

ಸಾಹಿತ್ಯ ಮತ್ತು ಸಂಗೀತವೆರಡನ್ನೂ ರಚಿಸುವವನು ವಾಗ್ಗೇಯಕಾರ. ಉತ್ತಮ ಮಟ್ಟದ ರಚನೆಯನ್ನು ರಚಿಸುವವನು ಶ್ರೇಷ್ಠ ವಾಗ್ಗೇಯಕಾರನೆನಿಸುತ್ತಾನೆ. ಒಳ್ಳೆಯ ಸಂಗೀತವನ್ನು ರಚಿಸಿ ಸಾಹಿತ್ಯವನ್ನು ಮಧ್ಯಮ ಮಟ್ಟದಲ್ಲಿ ರಚಿಸುವವನು ಮಧ್ಯಮ ವಾಗ್ಗೇಯಕಾರನು. ಇತರರು ರಚಿಸಿದ ಸಂಗೀತಕ್ಕೆ ಸಾಹಿತ್ಯವನ್ನು ಬರೆಯುವನು ಅಧಮ ವಾಗ್ಗೇಯಕಾರನೆನಿಸುತ್ತಾನೆ. ಉತ್ತಮ ಮತ್ತು ಮಧ್ಯಮ ವಾಗ್ಗೇಯಕಾರರ ಕೊಡುಗೆಯಿಂದ ಕರ್ನಾಟಕ ಸಂಗೀತ ರಚನಾ ಭಂಡಾರವು ಶ್ರೀಮಂತವಾಗಿದೆ.